ಇರಲು ಬಿಡೋದು ಒಳ್ಳೇದು' ಎನ್ನುತ್ತಾರೆ ಡಾಕ್ಟರುಗಳು. ಆಸ್ಪತ್ರೆಯ ಹಾಸಿಗೆ, ರೆಸ್ಪಿರೇಟರ್ ಸಮೇತ ಮಾರ್ಕ್ವೆಜ್ ಮರಳಿ ಮನೆ ಸೇರುತ್ತಾನೆ.

ಮಹಾಪ್ರತಿಭೆಯ ಕೊನೆಯ ದಿನಗಳು ಹತ್ತಿರವಾಗುತ್ತಿವೆ ಎಂದು ಎಲ್ಲರಿಗೂ ಅನ್ನಿಸುತ್ತಿದೆ. ಇದ್ದಕ್ಕಿದ್ದಂತೆ ಮನೆಯಲ್ಲಿ ಹಕ್ಕಿಯೊಂದು ಸತ್ತು ಬೀಳುತ್ತದೆ. 'ಇದು ಶುಭಶಕುನವೋ? ಅಪಶಕುನವೋ? ಈ ಹಕ್ಕೀನ ಆಚೆ ಎಸೀಬೇಕೋ? ಹೂಗಿಡಗಳ ಮಧ್ಯೆ ಹೂಳಬೇಕೋ?' ಚರ್ಚೆ ಶುರುವಾಗುತ್ತದೆ. ಲ್ಯಾಟಿನ ಅಮೆರಿಕದ ನಂಬಿಕೆ, ಜಾನಪದ, ನಿಗೂಢತೆ, ಮೂಢನಂಬಿಕೆಗಳ ಮಾಂತ್ರಿಕ ವಾಸ್ತವತಾವಾದಿ ಪರಿಸರವನ್ನು ಸೂರೆ ಹೊಡೆದು ಬರೆದಿದ್ದ ಕಾದಂಬರಿಕಾರನ ಮನೆಯಲ್ಲಿ ಇಂಥ ಚರ್ಚೆ ನಡೆದಿದ್ದು ತೀರ ಸಹಜವಾಗಿತ್ತು. ಆವತ್ತು ಮಧ್ಯಾಹ್ನದ ಹೊತ್ತಿಗೆ ಮಾರ್ಕ್ವೆಜ್ ಎದೆಬಡಿತ ನಿಂತುಹೋಯಿತು. ಸುದ್ದಿ ಹೊರ ಬಿದ್ದ ಸಂಜೆ ಓದುಗಿಯೊಬ್ಬಳು ಮಾರ್ಕ್ವೆಜ್‌ನ 'ಒನ್ ಹಂಡ್ರಡ್ ಯಿಯರ್ಸ್ ಆಫ್ ಸಾಲಿಟ್ಯೂಡ್' ಕಾದಂಬರಿಯ ಪ್ರಖ್ಯಾತ ಪಾತ್ರ ಅರ್ಸುಲ ಇಂಥದೇ 'ಹೋಲಿ ಥರ್ಸ್ ಡೇ' ದಿನ ಸತ್ತಿದ್ದನ್ನು, ಅರ್ಸುಲ ಸತ್ತಾಗ ದಿಕ್ಕೆಟ್ಟ ಹಕ್ಕಿಗಳು ಗೋಡೆಗೆ ಡಿಕ್ಕಿ ಹೊಡೆದು ಸತ್ತಿದ್ದನ್ನು ನೆನಸಿಕೊಂಡು ಬರೆದಳು.

ಅಪ್ಪನನ್ನು ಬೀಳ್ಕೊಟ್ಟ ಕೆಲ ದಿನಗಳ ನಂತರ ರೊಡ್ರಿಗೊ ಮೆಕ್ಸಿಕೋ ಸಿಟಿಯಿಂದ ಲಾಸ್ ಏಂಜಲೀಸ್‌ಗೆ ಹೊರಡಲು ವಿಮಾನ ಹತ್ತಿದ. ಅಪ್ಪನ ನೆನಪು ಪೂರಾ ಕೈಕೊಟ್ಟಿದ್ದಾಗಲೂ ಕೂಡ ಮಗ ಗುಡ್ ಬೈ ಹೇಳಿದಾಗಲೆಲ್ಲ, ಹಿಂದೆಲ್ಲ ಅನ್ನುತ್ತಿದ್ದಂತೆ, ಈಗಲೂ 'ಇರಪ್ಪಾ, ಯಾಕ್ ಹೊರಟೆ? ನನ್ ಬಿಟ್ಟು ಹೋಗ್ಬೇಡ' ಅನ್ನುತ್ತಿದ್ದುದು ನೆನಪಾಯಿತು. ಅಪ್ಪನ ಹಲವಾರು ಮಾತುಗಳು ಕಿವಿಯಲ್ಲಿ ಮೊರೆಯತೊಡಗಿದವು. ಅದರಲ್ಲೆಲ್ಲ ಅಪ್ಪಟ ಚಿನ್ನದಂಥ ಮಾತೊಂದನ್ನು ತನ್ನ ಕೊನೆವರೆಗೂ ನೆನಪಿಟ್ಟುಕೊಳ್ಳಬೇಕೆಂದು ಮಗನಿಗನ್ನಿಸಿತು: 'ತುಂಬ ಚೆನ್ನಾಗಿ ಬರೆದ ಬರವಣಿಗೆಗಿಂತ ಉತ್ತಮವಾದದ್ದು ಯಾವುದೂ ಇಲ್ಲ.'

ಇದಾದ ಒಂದೆರಡು ವಾರಕ್ಕೆ ರೊಡ್ರಿಗೊ ಮತ್ತೆ ಮೆಕ್ಸಿಕೋಗೆ ಬಂದು ಅಮ್ಮನ್ನ ನೋಡಿಕೊಂಡು ಮತ್ತೆ ಲಾಸ್ ಏಂಜಲೀಸ್ ವಿಮಾನದಲ್ಲಿ ಕೂತ. ಪಕ್ಕದಲ್ಲಿ ಕೂತಿದ್ದ ಹೆಂಗಸು ಸೆಲ್ ಫೋನಿನಲ್ಲಿ 'ಒನ್ ಹಂಡ್ರಡ್ ಯಿಯರ್ಸ್ ಆಫ್ ಸಾಲಿಟ್ಯೂಡ್' ಓದುತ್ತಿದ್ದಳು.

2020ರ ಹೊತ್ತಿಗೆ ಅಮ್ಮ ತೀರಿಕೊಂಡ ಮೇಲೆ ರೊಡ್ರಿಗೊ ಅಳುಕುತ್ತಲೇ ತನ್ನ ಟಿಪ್ಪಣಿಗಳನ್ನೆಲ್ಲ ಪ್ರಕಟಿಸುವ ಸಾಹಸ ಮಾಡಿದ. ಮಗ ಬರೆದ ಮಾರ್ಕ್ವೆಜ್ ಮರೆವಿನ ವರ್ಷಗಳನ್ನು ನೋಡನೋಡುತ್ತಾ, ವ್ಯಾಸ ಸೃಷ್ಟಿಸಿದ ಕರ್ಣನ ಮರೆವು, ಕಾಳಿದಾಸನ ದುಶ್ಯಂತನ ಮರೆವು ಇವೆಲ್ಲ ಕೇವಲ ಪುರಾಣ ಕತೆಗಳಲ್ಲ; ನಮ್ಮ ಪ್ರಾಚೀನ ಮಹಾಪ್ರತಿಭೆಗಳು ಸೃಷ್ಟಿಸಿದ ಮರೆವಿನ ಕಾಯಿಲೆಯ ರೂಪಕಗಳು ಎನ್ನಿಸತೊಡಗಿತು. ಎಲ್ಲ ಲೇಖಕ, ಲೇಖಕಿಯರ ಬದುಕಿನ ಕೊನೆಕೊನೆಗೆ ಅಕಸ್ಮಾತ್ ನೆನಪು ಇನ್ನೂ ಉಳಿದಿದ್ದರೂ ಬರೆಯಲಾಗದಂಥ ಗರ ಬಡಿದ ಸ್ಥಿತಿಯ, ಸೃಜನಶೀಲತೆ ಕಂತುವ ಘಟ್ಟದ ದುರಂತ ಕೂಡ ಹೆಚ್ಚುಕಡಿಮೆ ಮಾರ್ಕ್ವೆಜ್‌ನ ಕೊನೆಯ ವರ್ಷಗಳ ಮರೆವಿನ ದುರಂತದಂತೆಯೇ ಇರಬಹುದೇನೋ!




## ನಟರಾಜ್ ಹುಳಿಯಾರ್

ಕವಿ, ಕತೆಗಾರ, ಕಾದಂಬರಿಕಾರ, ವಿಮರ್ಶಕ, ಅಂಕಣಕಾರ, ನಾಟಕಕಾರ. ಬೋಧನೆ ಮತ್ತು ಬರವಣಿಗೆಯಿಂದ ಹೊಸ ತಲೆಮಾರನ್ನು ಪ್ರಭಾವಿಸುತ್ತಿರುವ ಮೇಷ್ಟ್ರು. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಗಾಂಧೀ ಅಧ್ಯಯನ ಕೇಂದ್ರದ ನಿರ್ದೇಶಕರು.